ಬೆಳೆದಿದ್ದರೆ ಅಂಥ ಅನುಬಂಧ ಬೆಳೆಯುತ್ತಿತ್ತೋ ಏನೋ. ನನ್ನ ಕಥೆಯಲ್ಲಿ ಯಾವುದೇ ತಿರುವುಗಳಿರಲಿಲ್ಲ.

ಸೈಯದ್ ರೂಮಿನೊಳಗಡೆ ಬಂದ. 'ಬಾಸ್, ಆ ಹೆಂಗಸು ಫೋನ್ ಮಾಡಿದ್ದಳು' ಎಂದ. ಯಾಕೋ ಈ ಬಾಸ್ ಅನ್ನುವ ಪದ ನನಗೆ ಇಷ್ಟವಾಗುವುದಿಲ್ಲ. ಹಳೆಯ ಸಿನಿಮಾಗಳಲ್ಲಿ ಖಳನಾಯಕರಿಗೆ ಬಾಸ್ ಅನ್ನುತ್ತಿದ್ದರು. ನನ್ನ ಮನಸ್ಸು ನನ್ನನ್ನು ಖಳನಾಯಕ ಎಂದು ಒಪ್ಪಿಕೊಳ್ಳಲು ಹಿಂಜರಿಯುತ್ತಿತ್ತು. ನನ್ನನ್ನು ಬಾಸ್ ಎನ್ನಬೇಡ ಎಂದು ಎಷ್ಟು ಬಾರಿ ಹೇಳಿದರೂ ಅವನು ಒಪ್ಪಿಕೊಳ್ಳಲಿಲ್ಲ. 'ಬಾಸ್ ಅನ್ನುವ ಪದದ ತೂಕ ಯಾವುದಕ್ಕೂ ಇಲ್ಲ ಬಾಸ್' ಎನ್ನುತ್ತಿದ್ದ.

'ಏನಂತೆ?' ಎಂದೆ. 'ನಾಳೆ ಎಂಟು ಗಂಟೆಗೆ. ಹೋಟೆಲ್ ಗೋಲ್ಡನ್ ಪಾರ್ಕ್‌ನಲ್ಲಿ ಟೇಬಲ್ ಕಾಯ್ದಿರಿಸಿದ್ದೇನೆ' ಎಂದ.

ಅಂದರೆ, ಅವಳು ಹೇಳಿದ್ದಂತೆಯೆ ಅವಳೊಡನೆ ಏಕಾಂತ ಭೇಟಿ. ಇತ್ತೀಚೆಗೆ ನಾನು ಹೀಗೆಲ್ಲ ಯಾರನ್ನೂ ಭೇಟಿ ಮಾಡಿದವನೇ ಅಲ್ಲ. ಏನಿದ್ದರೂ ಅದೆಲ್ಲ ನನ್ನ ಈ ಅಧಿಕೃತ ಬಂಗಲೆಯಲ್ಲೇ. ಪ್ಯಾರಡೈಸ್ ಹೆಸರಿನ ಈ ಮೂರು ಕೋಣೆಗಳ ಡ್ಯೂಪ್ಲೆಕ್ಸ್ ಕಟ್ಟಡವೇ ನನ್ನ ಮನೆ, ಕಚೇರಿ, ಮೀಟಿಂಗ್ ಸ್ಥಳ ಎಲ್ಲ.

'ರಮಣ್ ಸಿಂಗ್ ಹೋಟೆಲಲ್ಲವೆ ಅದು?'

'ಹೌದು ಬಾಸ್, ಬೆಂಗಳೂರಿನ ಹೊರವಲಯದಲ್ಲಿ ಹದಿನೈದು ಕಿಲೋ ಮೀಟರ್ ದೂರದಲ್ಲಿದೆ. ನಾನು ಎಲ್ಲ ವ್ಯವಸ್ಥೆ ಮಾಡಿದೀನಿ.'

ಸೈಯದ್ ಮಾಡಿದ ವ್ಯವಸ್ಥೆ ಅಂದರೆ ಅದು ಅತ್ಯಂತ ಸುರಕ್ಷಿತ ಎಂದೇ ಅರ್ಥ. ಸುಮಾರು ನಾಲ್ಕು ವರ್ಷದಿಂದ ನನ್ನ ಜೊತೆಯಲ್ಲಿದ್ದಾನೆ. ಪ್ರತಿಷ್ಠಿತ ಕಾಲೇಜಿನಿಂದ ಎಲೆಕ್ಟ್ರಾನಿಕ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾನೆ. ನನ್ನ ವೃತ್ತಿಗೆ ಬೇಕಾದ ರಹಸ್ಯವನ್ನು ಕಾಪಾಡಬಲ್ಲ ಸರ್ವೆಲೆನ್ಸ್ ಸಿಸ್ಟಂ ಅನ್ನು ನನಗೆ ಪರಿಚಯಿಸಿದ್ದೇ ಅವನು. ನನ್ನ ಹಣ ಕಾಸಿನ ಲೆಕ್ಕದ ಬಗ್ಗೆಯೂ ಅವನಿಗೆ ವಿಶೇಷವಾದ ಪರಿಣತಿ ಇದೆ. ಸಭ್ಯ ಸಮಾಜದಲ್ಲಿ ಗೌರವಾನ್ವಿತ ಎಂಜಿನಿಯರ್ ಆಗಿ ಪುಟ್ಟ ಸುಖೀ ಸಂಸಾರವನ್ನು ಕಟ್ಟಿಕೊಂಡಿರುವುದನ್ನು ಬಿಟ್ಟು, ನನ್ನ ಲೋಕಕ್ಕೆ ಏಕೆ ಹೆಜ್ಜೆ ಇಟ್ಟನೋ ಏನೋ! ಕೇಳಿದಾಗಲೆಲ್ಲ 'ಇದೇ ಥ್ರಿಲ್ ಬಾಸ್' ಎನ್ನುತ್ತಿದ್ದ. ನಾನು ಒತ್ತಾಯ ಮಾಡಲಿಲ್ಲ. ನನಗೂ ಈ ವೃತ್ತಿ ಜೀವನದ ಕಡೆಯ ದಿನಗಳಲ್ಲಿ ಒಬ್ಬ ನಂಬಿಕಸ್ಥ ಸಹಾಯಕನ ಅವಶ್ಯಕತೆ ಇತ್ತು.

'ನಾಳೆ ಏಳೂ ಮುಕ್ಕಾಲರ ಹೊತ್ತಿಗೆ ನಮ್ಮ ಟೇಬಲ್ ಸುತ್ತ ಆರು ಟೇಬಲ್‌ಗಳಲ್ಲಿ ಯಾರೂ ಕಸ್ಟಮರ್ಸ್ ಇರುವುದಿಲ್ಲ. ಸಿಸಿ ಟೀವಿ ಕ್ಯಾಮೆರಾಗಳು ಆಫ್ ಆಗಿರುತ್ತವೆ. ಯಾವುದೇ ಸ್ಪೀಕರ್ ಚಾಲೂ ಇರುವುದಿಲ್ಲ. ಸ್ವತಃ ರಮಣ ಸಿಂಗ್‌ನೇ ಸರ್ವ್ ಮಾಡುತ್ತಾನೆ.'

ನಾನು ಸರಿ ಎಂದೆ. ಸೈಯದ್ ಅವನ ರೂಮಿಗೆ ಹೋದ. ಅವನು ಹೀಗೇ. ಹೆಚ್ಚು ಮಾತನಾಡುವುದಿಲ್ಲ. ಆದರೆ ವಹಿಸಿದ ಕೆಲಸ ಮಾತ್ರ ಫರ್‌ಫೆಕ್ಟ್.

ನಾನು ಸೋಫಾ ಮೇಲೆ ಕೂತು ಟೀವಿ ಆನ್ ಮಾಡಿದೆ. ಕರ್ನಾಟಕದಲ್ಲಿ ಚುನಾವಣೆಯ ಕಾವು ತೀವ್ರವಾಗಿತ್ತು. ನಾನು ಈ ಬಾರಿ ಚುನಾವಣೆಯಲ್ಲಿ ಹೆಚ್ಚು ತೊಡಗಿಸಿಕೊಂಡಿರಲಿಲ್ಲ. ಹಣ ಕೇಳಿದವರಿಗೆ ಹಣ, ಭದ್ರತೆ ಕೇಳಿದವರಿಗೆ ಭದ್ರತೆ. ಇವೆಲ್ಲವನ್ನೂ ಈ ಬಾರಿ ಸೈಯದ್ ಯಶಸ್ವಿಯಾಗಿ ನೋಡಿಕೊಳ್ಳುತ್ತಿದ್ದ. ಚಾನೆಲ್ ಬದಲಾಯಿಸಿದೆ. ಹಳೆಯ ಹಿಂದೀ ಹಾಡೊಂದು ತೂರಿ ಬಂತು. 'ಈ ಪ್ರೀತಿಯ ದಾರಿಯಲ್ಲಿ ಹುಷಾರಾಗಿ ನಡೆ, ಇಲ್ಲಿ ಹೆಜ್ಜೆ ಹೆಜ್ಜೆಗೂ ಅಡ್ಡಿ ಆತಂಕಗಳಿವೆ' ಸರಿಯೇ. ಆದರೂ ಜನ ಮುಗಿಬಿದ್ದು ಈ ರಸ್ತೆಯಲ್ಲೇ ನಡೆಯುತ್ತಾರಲ್ಲ! ಆ